ಪ್ರವೇಶದ ಸಂದರ್ಭದಲ್ಲಿ ನಿಗದಿತ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಜರುಪಡಿಸಿ ಪ್ರವೇಶ ಪಡೆದು ಅರ್ಜಿ ಸಲ್ಲಿಸಿದ ಅರ್ಹವಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಯನ್ನು ಸರ್ಕಾರಿ ಕಾಲೇಜುಗಳಲ್ಲಿ ನಿಗದಿಪಡಿಸುವ ದರಗಳಂತೆ ನಿಗದಿತ ಶುಲ್ಕವನ್ನು ಮಂಜೂರು ಮಾಡಲಾಗುತ್ತದೆ.

ಈ) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ನಿಗದಿತ ಶುಲ್ಕಗಳನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಪಾವತಿ ಮಾಡಲಾಗುತ್ತದೆ.
ಸಂಕಷ್ಟಕ್ಕೊಳಗಾದ ವಿದ್ಯಾರ್ಥಿಗಳ ಪ್ರಕರಣಗಳು ಇರುವುದಿಲ್ಲ.

ಕೊಳವೆಬಾವಿಗಳ ಅನುದಾನ

2743 (3230); ಶ್ರೀ ನರೇಂದ್ರ ಸ್ವಾಮಿ ಪಿ.ಎಂ. (ಮಳವಳ್ಳಿ)

ಅ) ಕಳೆದ 3 ವರ್ಷಗಳಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಎಷ್ಟು ಕೊಳವೆಬಾವಿಗಳನ್ನು ಕೊರೆಯಲಾಗಿದೆ;

ಆ) ಮಂಜೂರಾಗಿದ್ದ ಕೊಳವೆಬಾವಿಗಳೆಷ್ಟು; ಅದರಲ್ಲಿ ಕೊರೆಯದೇ ಇನ್ನೂ ಬಾಕಿಯಿರುವ ಕೊಳವೆಬಾವಿಗಳೆಷ್ಟು; ಬಾಕಿಯಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಕೊರೆದಿರುವ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ; ಇನ್ನೂ ಎಷ್ಟು ಬಾಕಿಯಿದೆ; ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ)

ವಿವರ	ಕಳೆದ 3 ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ
ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ	80
ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	40

ಆ) **ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ** ಮಳವಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 148 ಕೊಳವೆಬಾವಿಗಳನ್ನು ಮಂಜೂರು ಮಾಡಲಾಗಿದೆ. ಸದರಿ ಕ್ಷೇತ್ರದಲ್ಲಿ 68 ಕೊಳವೆಬಾವಿಗಳನ್ನು ಕೊರೆಯಲು ಬಾಕಿ ಇರುತ್ತವೆ.

ಬಾಕಿ ಉಳಿದಿರುವ 68 ಕೊಳವೆಬಾವಿಗಳನ್ನು ಕೊರೆಯುವ ಕೆಲಸ ಪ್ರಗತಿಯಲ್ಲಿದೆ. 2013–14ನೇ ಸಾಲಿನ ಗುರಿಯಲ್ಲಿ ಶೇ.25 ಭಾಗ ಕೊಳವೆಬಾವಿಗಳನ್ನು ಕೊರೆಯಲು ಸರ್ಕಾರದಿಂದ ಆದೇಶವಾಗಿದ್ದು, ಇವುಗಳನ್ನು ಕೊರೆಯಲು ಕ್ರಮಜರುಗಿಸಲಾಗಿದೆ. 2013–14ನೇ ಸಾಲಿನಲ್ಲಿ ಉಳಿದ ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಗೆ ಶ್ರೀ ಚಿನ್ನಪ್ಪ ರೆಡ್ಡಿ, ಬೆಂಗಳೂರು ಎಂಬುವರು ಕರ್ನಾಟಕ ಘನ ಉಚ್ಚನ್ಯಾಯಾಲಯದಿಂದ ಮಧ್ಯಾಂತರ ತಡೆಯಾಜ್ಞೆ ತಂದಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕಾನೂನು ಕ್ರಮ ಜರುಗಿಸಲಾಗುತ್ತಿದೆ. ನ್ಯಾಯಾಲಯದ ತಡೆಯಾಜ್ಞೆ ತೆರವಾದ ಬಳಿಕ ಕಾಮಗಾರಿ ಪ್ರಾರಂಭಿಸಲಾಗುವುದು.

ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಒಟ್ಟು 60 ಕೊಳವೆ ಬಾವಿಗಳು ಮಂಜೂರಾಗಿದ್ದು, ಅದರಲ್ಲಿ 20 ಕೊಳವೆ ಬಾವಿಗಳು ಕೊರೆಯಲು ಬಾಕಿ ಇರುತ್ತವೆ. 2013–14ನೇ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಆಹ್ವಾನಿಸಿ ದರ ನಿಗಧಿ ಹಾಗೂ

ಏಜೆನ್ಸಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸದೇ ಇರುವುದರಿಂದ ಕೊಳವೆ ಬಾವಿ ಕೊರೆಯಲು ಬಾಕಿ ಉಳಿದಿರುತ್ತದೆ. 2012–13ನೇ ಸಾಲಿನ ದರಗಳನ್ನು ಮುಂದುವರೆಸಿ 2013–14ನೇ ಸಾಲಿನ ಶೇ. 25 ರಷ್ಟು ಗುರಿಯ ಕೊಳವೆ ಬಾವಿಗಳನ್ನು ಕೊರೆಯಲು ಕಾರ್ಯದೇಶ ನೀಡಲಾಗಿದೆ. 2013–14ನೇ ಸಾಲಿನ ಗುರಿಯ ಬಾಕಿ ಕೊಳವೆ ಬಾವಿಗಳನ್ನು ಕೊರೆಯಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಇ) **ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ** ಕೊರೆದಿರುವ 80 ಕೊಳವೆಬಾವಿಗಳಲ್ಲಿ ಇದುವರೆವಿಗೂ 54 ಬಾವಿಗಳಿಗೆ ವಿದ್ಯುದ್ದೀಕರಣಗೊಳಿಸಲಾಗಿದೆ. ಬಾಕಿ ಇರುವ 36 ಕೊಳವೆಬಾವಿಗಳಿಗೆ ವಿದ್ಯುದ್ದೀಕರಣಗೊಳಿಸಲು ಆನ್‌ಲೈನ್ ಮುಖಾಂತರ ನೊಂದಣಿ ಮಾಡಿಸಿ, ಸಿ.ಆರ್. ಸಲ್ಲಿಸಲು ನಿಗಮದವತಿಯಿಂದಲೇ ವೈ.ಎಂ.ಡಿ/ಎಂ.ಎಸ್.ಡಿ ಹಣವನ್ನು ಚೆಸ್ಕಾಂಗೆ ತುಂಬಲಾಗಿದೆ. ಚೆಸ್ಕಾಂನವರು ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ವಿದ್ಯುದ್ದೀಕರಣ ಕೆಲಸ ಪ್ರಗತಿಯಲ್ಲಿದೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊರೆದಿರುವ 13 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 27 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುತ್ತದೆ. ಬಾಕಿ ಕೊಳವೆ ಬಾವಿಗಳನ್ನು ವಿದ್ಯುತ್ ಸರಬರಾಜು ಕಂಪನಿಯಲ್ಲಿ ನೊಂದಾಯಿಸಿ ವಿದ್ಯುತ್ ತೇವಣಿ ಮೊತ್ತ ಪಾವತಿಸಿ ವಿದ್ಯುದ್ದೀಕರಣಗೊಳಿಸಲು ಕ್ರಮವಹಿಸಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದ್ದು ಶೀಘ್ರದಲ್ಲಿಯೇ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸಲಾಗಿದೆ.